ಸತಿಯನ್ನು ಸಂತೈಸಿ, ಶ್ರೀಹರಿಯನ್ನು ನೆನೆಯುತ್ತ ಮುಂದೆ ಸಾಗುತ್ತಿರಲು ಭಯಂಕರ ಗೊಂಡಾರಣ್ಯ ಎದುರಾಯಿತು. ಕ್ರೂರ ಖಗಮೃಗಗಳಿರುವ ಕಾಡನ್ನು ಅವರು ಸೇರಿದಂತೆ ಅರವಿಂದ ಸಖನಾದ ಸೂರ್ಯನು ಪಶ್ಚಿಮದ ಕಡಲಲ್ಲಿ ಇಳಿದನು. ಲೋಕಾಧಿಪತಿ ನಳನ ರಾಣಿಗೆ ಶೋಕ ಹಬ್ಬಿದ ರೀತಿಯಲ್ಲಿ ಕತ್ತಲೆ ಲೋಕವನ್ನು ಮುಸುಕಿತು– ಧರಣಿ ಮುಚ್ಚುವಂತೆ. ಭೀಕರ ಧ್ವನಿಗಳಿಗೆ ಹೆದರಿದ ದಮಯಂತಿಯನ್ನು ವಿವೇಕನಿಧಿ ನಳನು ಸಮಾಧಾನಗೊಳಿಸಿದನು. ಬಿಗಿದಪ್ಪಿಕೊಂಡು ನೆತ್ತಿಯ ಮೇಲೆ ಬಾಯಿಯಿಂದ ಉರುಬುತ್ತ ಶಾಂತವಾಗಿಸಿ,

'ದಮಯಂತಿ ಹೆದರ ಬೇಡ, ಭಯ ಪಡಬೇಡ. ಇದು ವಿಧಿ ಬರೆದ ಬರೆಹ' ಎಂದು ಹೇಳುತ್ತ ತರಗೆಲೆಯ ಹಾಸಿನಲ್ಲಿ ಮಲಗಿಸಿದನು. ಅವಳನ್ನೇ ನೋಡುತ್ತ, 'ರತ್ನ ಮಂಚದಲ್ಲಿ ಮಲಗಿ ಪರಮ ಸುಖದಲ್ಲಿದ್ದ ಸತಿಗೆ ವಿಧಿ ಹೀಗೆ ಮಾಡಿತಲ್ಲ! ಹರಹರ!' ಎಂದು ಮರುಗಿ ಕಂಬನಿ ದುಂಬಿದನು.

ಅವನ ಮನಸ್ಸು ಹಲವು ಆಲೋಚನೆಗಳ ಬೀಡಾಯಿತು. ಅವಳು ತನ್ನನ್ನು ರಾಜಹಂಸಗಳ ನುಡಿಯಿಂದ ಮೆಚ್ಚಿ ಕೈಹಿಡಿದು ತನ್ನನ್ನೆ ಸದಾ ಧ್ಯಾನಿಸುವುದನ್ನು ನೆನೆದನು. ಇವಳು ಎಲ್ಲಾ ಪತಿವ್ರತಾ ಸ್ತ್ರೀಯರಿಗಿಂತ ತುಸು ಹೆಚ್ಚು– ನನ್ನನ್ನು ಬಿಟ್ಟಿರುವವಳಲ್ಲ ಎಂದು ಹರ್ಷಗೊಂಡನು. ಮತ್ತೆ ಚಿಂತೆಗೆ ಒಳಗಾದನು. ಇವಳಿಗೆ ಗೊತ್ತಾಗದಂತೆ ನಾನು ಕಾಣದೆ ಹೋದರೆ ಆಗ ತನ್ನ ತಂದೆಯ ಮನೆಗೆ ಹೋಗುತ್ತಾಳೆ. ತಾನಿದ್ದರೆ ತನ್ನನ್ನು ಖಂಡಿತ ಬಿಡಳು– ಎಂದು ಆಲೋಚಿಸಿ ಅವಳನ್ನು ನಿದ್ರೆ ಹೋಗುವಂತೆ ಮಾಡಿದನು.

ಮೈ ಮರೆತು ಮಲಗಿದವಳ ಮಗ್ಗುಲಸೆರಗನ್ನು ಮೆಲ್ಲನೆ ಬಿಡಿಸಿಕೊಂಡನು. ಆ ವಸ್ತ್ರವನ್ನು ತೆಗೆದುಕೊಂಡು, ಮಲಗಿದ್ದ ಸತಿಯನ್ನು ನೋಡುತ್ತ ಮನದಲ್ಲಿ ಮರುಗಿದನು. 'ಹರಿ ಹರಿ!! ವರ ಜಗತ್ಪತಿ ಅಡವಿಯಲ್ಲಿ ಇವಳನ್ನು ಎಚ್ಚರಿಸದೆ ತಾನು ಹೋಗುವುದು ಹೇಗೆ?' ಎಂದು ದೀರ್ಘವಾಗಿ ಉಸಿರುಬಿಟ್ಟನು.

ಮಡದಿಯನ್ನು ಬಿಟ್ಟು ಹತ್ತೆಂಟು ಅಡಿ ಹೆಜ್ಜೆ ಇಟ್ಟು, ಮನಸ್ಸು ತಾಳಲಾರದೆ ಮರಳಿ ಬಂದನು. ತದೇಕ ಚಿತ್ತದಿಂದ ಕಣ್ಣು ಮಿಟುಕಿಸದೆ ಆ ಚಂದ್ರಮುಖಿಯನ್ನು ಕಣ್ತುಂಬಿಕೊಂಡನು. ಒತ್ತಿಬರುವ ದುಃಖದಲ್ಲಿ ಮೆಲ್ಲನೆ ಸಾಗಿ ಮತ್ತೆ ಸತಿಯನ್ನು ನೋಡಲು ಮರಳಿದನು. ಕೊನೆಗೆ ಗಟ್ಟಿ ಮನಸ್ಸು ಮಾಡಿಕೊಂಡು ಅತಿ ಶೋಕಕ್ಕೊಳಗಾಗಿ ಯೋಜನ ದೂರ ನಡೆದು ಹೋದನು.

## ಕರಗಿತರಸನ ಧೈರ್ಯ ಚಿತ್ತದಿ ಮುರಿದುದಗ್ಗದ ಮಹಿಮೆ

ನಳನ ಮನಸ್ಸು ಒಮ್ಮೆ ಮುರುಗಿತು, ಕಂಗಳು ನೋಡಲು ಬಯಸಿತು. ಅವಳು ತನ್ನೊಡನೆ ಇಲ್ಲವಲ್ಲ ಎಂದು ಅವನ ಹೃದಯ ಕಳವಳದ ಬೀಡಾಯಿತು. ಅರಸನಾದ ಅವನ ಧೈರ್ಯ ಉಡುಗಿ ಹೋಯಿತು. ಅವನ ಚಿತ್ತದಲ್ಲಿ ತಾನು ಶ್ರೇಷ್ಠನೆಂಬ ಮಹಿಮಾಭಾವ ಮುರಿದುಬಿತ್ತು. ಶೋಕದ ಭಾರದಲ್ಲಿ ಕಳವಳಗೊಂಡು ಕತ್ತಲ ಕಾಡಲ್ಲಿ ಸಾಗಿದನು.

ಧರ್ಮರಾಯನೇ ಕೇಳು. ನಳಮಹಾರಾಜನು ಕರುಣೆ ತೋರದೆ ಸತಿಯನ್ನು ಕಾಡಿನಲ್ಲಿ ತೊರೆದುಬಿಟ್ಟನು. ಆ ಕಾಡಿನಲ್ಲಿ ಅವಳು ಹುಲಿ ಕರಡಿಗಳ ಉಪಟಳವನ್ನು ಹೇಗೆ ಸೈರಿಸಿಕೊಳ್ಳುವಳೋ ಅವಳ ಮೊರೆಯ ಲಾಲಿಸಿ ನೋಡುವೆ ಎಂದು– ಅತಿ ಪ್ರೇಮದಿಂದ ಬಂದು, ಕಮಲ ಮುಖಿಯನ್ನು ಎಚ್ಚರಿಸುವ ರೀತಿ– ಸೂರ್ಯನು ಪೂರ್ವದಲ್ಲಿ ತಲೆ ದೋರಿದನು.

ಆಗ ದಮಯಂತಿ ಮೈ ಮುರಿದು ನಿದ್ರೆಯಿಂದ ಎಚ್ಚೆತ್ತಳು. ಮೆಲ್ಲನೆ ಎಡ ಬಲವನ್ನು ನೋಡಿ ಪತಿಯನ್ನು ಕಾಣದೆ ಆತಂಕಗೊಂಡು ಮೂರ್ಛೆಗೊಳಗಾಗಿ ಮೈ ಮರೆತು ಮಲಗಿದಳು. ಮರು ನಿಮಿಷದಲ್ಲಿ ಎಚ್ಚರಗೊಂಡು ಸುತ್ತ ಮುತ್ತ ನೋಡಿ ಎಲ್ಲಿಯೂ ಕಾಣದಿರಲು ಆ ಬೆಟ್ಟ ಹೆಮ್ಮರಗಳ ಭೀಕರ ಅರಣ್ಯದ ಮಧ್ಯದಲ್ಲಿ ರೋದಿಸಿದಳು. ದುಃಖ ಹೊಮ್ಮಿ ಬರಲು 'ಹಾ ರಮಣ ನಳನೃಪತಿ. ಹಾ ರಣಧೀರ, ಸದ್ಗುಣಿ, ವೈರಿಸಂಹಾರ, ದಾನಶೂರ, ಸತ್ಯ ಹಾಗೂ ನಿರ್ಮಲನೇ ಈ ಘೋರ ಕಾನನದಲ್ಲಿ ನಿನ್ನನ್ನು ನಂಬಿದವಳನ್ನು ಬಿಟ್ಟು ಹೋಗುವರೇ? ನನಗಿನ್ನಾರು ಗತಿ? ನಿನ್ನ ಮುಖತೋರು' ಎಂದು ಗೋಳಿಟ್ಟಳು.

ಒತ್ತರಿಸಿ ಬರುವ ಆತಂಕದಲ್ಲಿ ಕಾಡಿನಲ್ಲಿ ಅಲೆದಾಡುತ್ತ 'ಮೆಟ್ಟಿ ಬರುತ್ತಿರುವ ಆಪತ್ತಿನಲ್ಲಿ ನಾನು ಭೂಮಿಯ ಒಳಗೆ ಇಳಿಯಲೇ? ಬೆಂಕಿಗೆ ಆಹುತಿಯಾಗಲೇ? ಕಾಳವಿಷದ ಮಡುವಿನಲ್ಲಿ ಮುಳುಗಲೇ? ಹಾಸು ಬಂಡೆಗೆ ತಲೆ ಚಚ್ಚಿಕೊಳ್ಳಲೇ? ವಿಷಕುಡಿದು ಪ್ರಾಣ ಕಳೆದುಕೊಳ್ಳಲೇ?' ಎಂದು ಶೋಕಸುತ್ತ, ಸುತ್ತಲೂ ನೋಡಿ 'ರಾಜ ಹಂಸಗಳೇ ನೀವು ನನ್ನ ಪತಿಯನ್ನು ನೋಡಿದಿರಾ? ಗಿಳಿ ಕೋಗಿಲೆಗಳೇ ನೀವು ನನ್ನ ಪ್ರಿಯನನ್ನು ನೋಡಿದಿರಾ? ಮೃಗ ಪಕ್ಷಿಗಳೇ ನೀವು ಚಕ್ರವರ್ತಿಯನ್ನು ನೋಡಿದಿರಾ?' ಎಂದು ನಿಸರ್ಗ ಚೇತನಗಳನ್ನು ಪ್ರಶ್ನಿಸುತ್ತ ಹಲವು ಬಗೆಯಲ್ಲಿ ನೊಂದಳು. ತಲೆ ಕೆದರಿಕೊಂಡು ಮಣ್ಣಿನಲ್ಲಿ ಹೊರಳಾಡಿದಳು.

## ಧರೆಯೊಳಗಡವಿ ಪಾಲಾಗೆಂದು ಪಡೆದಳೊ ತನ್ನ ಜನನಿ

'ಅಯ್ಯೋ, ನನ್ನನ್ನು ನನ್ನವ್ವ ಈ ಧರೆಯಲ್ಲಿ ಅಡವಿ ಪಾಲಾಗೆಂದು ಹೆತ್ತಳೇ? ಈ ಜಗದಲ್ಲಿ ನನ್ನಂತೆ ಪತಿಗೆ ಈ ಒಡಲನ್ನು ಒಪ್ಪಿಸಿದವರು ಇರುವರೇ? ನನ್ನ ನಲ್ಲ, ಪ್ರಿಯ ನಳ ಒಮ್ಮೆ ನಿನ್ನ ಮುಖ ತೋರಿಸು' ಎಂದು ಆರ್ತಳಾಗಿ ಗೋಳಿಟ್ಟಳು.

ಧರ್ಮರಾಜನೇ ಕೇಳು. ಹೀಗೆ ದಮಯಂತಿ ಪತಿಗಾಗಿ ಹಂಬಲಿಸುತ್ತ ಮುಗಿಲು ನೋಡಿ ಮೊರೆಯಿಡುತ್ತ ಬರುವಾಗ ಮತ್ತೊಂದು ಕಂಟಕ ಎದುರಾಯಿತು. ದಾರಿಯಲ್ಲಿ ತರಗೆಲೆಯ ಹಕ್ಕೆಯಲ್ಲಿ (ನೆಲೆ; ಆಶ್ರಯ ಸ್ಥಾನ) ಮಹಾ ಸರ್ಪವು ಒಳಿಯ ನಿದ್ದೆ ಮಾಡುತ್ತ ಮೌನವಾಗಿ ಬಿದ್ದುಕೊಂಡಿತ್ತು. ದಮಯಂತಿಯು ಸರ್ಪವನ್ನು ಕಾಣದೆ ತುಳಿದುಬಿಟ್ಟಳು. ತಕ್ಷಣ ಆ ಹಾವು ಕೋಪಗೊಂಡು ವಿಷಕಾರಿತು. ರೌದ್ರರೂಪಿನಿಂದ ಅವಳನ್ನು ಹಿಡಿದು– ಚಂದ್ರನನ್ನು ನುಂಗುವ ರಾಹುವಿನಂತೆ– ನುಂಗತೊಡಗಿತು.

ದಮಯಂತಿಯು ಭಯಬೀತಳಾಗಿ 'ಹಾ ರಮಣ ನಳನೃಪತಿಯೇ, ನನ್ನನ್ನು ಯಾರ ವಶಮಾಡಿ ಹೊರಟು ಹೋದೆ? ಹರಿ ಹರಿ!! ಕ್ರೂರ ಸರ್ಪನ ಬಾಯ್ಗೆ ತುತ್ತಾದೆ. ಜಗನ್ನಾಥ ಯಾರಿಗೆ ನನ್ನ ಈ ಹೀನ ದೆಸೆಯನ್ನು ಕೂಗಿ ಹೇಳಿಕೊಳ್ಳಲಿ? ನನ್ನ ಪ್ರಾಣವನ್ನು ಯಾರು ಕಾಪಾಡುವರು? ಅಕಟಕಟ! ಕೃಷ್ಣ, ಮುಕುಂದ ಕಾಪಾಡು' ಎಂದು ಕೂಗಿಕೊಂಡಳು.

ಆ ಕಾಡಿನ ಬೆಟ್ಟದ ತುದಿಯಲ್ಲಿದ್ದ ಓರ್ವ ಬೇಟೆಗಾರನಿಗೆ ಆ ಕೂಗು ಕೇಳಿಸಿತು. ತಕ್ಷಣ ಅವನು ಬಿಲ್ಲು ಬಾಣಗಳೊಡನೆ ಅಲ್ಲಿಗೆ ಬಂದನು. ಲತಾಂಗಿ ದಮಯಂತಿಯನ್ನು ಹಿಡಿದು ನುಂಗುವ ಕಾಳಸರ್ಪವನ್ನು ಕಂಡನು. ಕತ್ತಿಯಿಂದ ಅದನ್ನು ಕತ್ತರಿಸಿ ಅವಳನ್ನು ಉಳಿಸಿದನು.

ಅದನ್ನು ನೋಡಿದ ದೇವತೆಗಳು ಹಾ ಹಾ!! ಎಂದು ಸಂತೋಷ ವ್ಯಕ್ತಪಡಿಸಿದರು.

ಧರ್ಮರಾಜನೇ ಕೇಳು. ದಮಯಂತಿಗೆ– ರಾಹುವಿನ ಕಟವಾಯಿಯಲ್ಲಿ ಸಿಲುಕಿದ ಚಂದ್ರನನ್ನು ಹೊರಗೆಳೆದು ತಂದಂತಾಯಿತು. ಮೂರ್ಛೆಹೋಗಿದ್ದ ಅವಳು ಬೇಡನ ಮಂತ್ರದಿಂದ ಎಚ್ಚರಗೊಂಡಳು. ಅಲ್ಲಿ ಒಂದು ಕೆಂದಾವರೆಯ ಕೊಳದಲ್ಲಿ ಮಿಂದು ನಿಂತುಕೊಂಡಳು.

ಆಗ ಆ ಬೇಡ 'ನೀನು ನನಗೆ ಹೆಂಡತಿಯಾಗು' ಎಂದು ಕೇಳಿಕೊಳ್ಳಲು, ಸಿಟ್ಟುಗೊಂಡ ದಮಯಂತಿಯು 'ನೀನು ನನಗೆ ಪ್ರಾಣವನ್ನಿತ್ತು ಸಲಹಿದ ತಂದೆಯಲ್ಲವೇ? ನಾನು ಕೋಪಗೊಂಡರೆ ನಿನಗೆ ಶಾಪವನ್ನು ಕೊಡುವೆನು. ಇಲ್ಲಿಂದ ಹೋಗು' ಎಂದು ಹೇಳಿದಳು. ಆ ನುಡಿ ಕೇಳಿ ಭಯಗೊಂಡ ಬೇಡನು ತಲೆಬಾಗಿಸಿ ಹೊರಟು ಹೋದನು.

ದಮಯಂತಿಯು ತನ್ನ ಪತಿಯನ್ನು ನೆನೆದು ಹಂಬಲಿಸುತ್ತ ಮನದಲ್ಲಿಯೇ ಮರುಗಿದಳು. ಕಾಡಿನಲ್ಲಿ ಅಲೆದಾಡಿ ಹುಡುಕಿದಳು. ಅವನು ಎಲ್ಲಿಯೂ ಕಾಣದಿರಲು ಶೂನ್ಯ ಭಾವಸ್ಥಿತಿಗೆ ಒಳಗಾದಳು. ಕಣ್ಣೀರ ಕೋಡಿಯಲ್ಲಿ ಮುಂದೆ ಸಾಗಿದಳು.

ಅರಸನೇ ಆಶ್ಚರ್ಯವನ್ನು ಕೇಳು. ಅವಳು ಕಾಡಿನಲ್ಲಿ ನಡೆದು ಹೋಗುತ್ತಿರಲು, ಅವಳ ಪಾತಿವ್ರತ್ಯ ಮಹಿಮೆಗೆ ಅಲ್ಲಿದ್ದ ಭೂತ, ಬೇತಾಳಗಳು ತೊಲಗಿ ಹೋದವು. ಕರ್ರೂರ ಪ್ರಾಣಿಗಳಾದ ಶರಭ, ಕಾಡಾನೆ, ಸಿಂಹಗಳು ಅಲ್ಲಿಂದ ದೂರ ಸರಿದವು.

## ಮುನ್ನೇನ ನೋಂತೆನೊ ಪತಿಯಗಲಿ ಘನ ಕಾನನಕೆ ಗುರಿಯಾದೆ

ದಮಯಂತಿಯು ಹಾಗೆ ಸಾಗುತ್ತ, ತೇಜಸ್ವಿ, ತಪಸ್ವಿಗಳ ಸಮೂಹ ಒಂದನ್ನು ಕಂಡಳು. ಕಣ್ಣೀರು ಸುರಿಸುತ್ತ ಬಂದ ಅವಳನ್ನು ಆ ಕರುಣಾಳು ಮುನಿಗಳು ಕೇಳಿದರು.

'ತಾಯಿ ನೀನಾರು? ಇಲ್ಲಿಗೆ ಬಂದ ಕಾರಣವೇನು?'

(ಸಶೇಷ)